# ಪುಣೆಯಲ್ಲಿ ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ದೇವಾಲಯ

ಪುಣೆ ಮಹಾರಾಷ್ಟ್ರದ ಸಾಂಸ್ಕೃತಿಕ ಕೇಂದ್ರ. ಭಾರತದ ಸಾಂಸ್ಕೃತಿಕ ಪರಂಪರೆಯ ಸಣ್ಣ ಪ್ರತಿಬಿಂಬವೊಂದನ್ನೇ ಇಲ್ಲಿ ಕಾಣಬಹುದು. ಅನುಭಾವದ ಸಂತರು ಒಂದು ಕಡೆಯಾದರೆ, ಸೌಜನ್ಯ, ಔದಾರ್ಯ, ಸಜ್ಜನಿಕೆಗೆ ಸಮಸಮವಾಗಿ ಶೌರ್ಯಸಾಹಸಗಳನ್ನು ಮೆರೆದ ಇತಿಹಾಸ ನಿರ್ಮಾಪಕರು ಇನ್ನೊಂದು ಕಡೆ.

೧೮೯೨ರಲ್ಲಿ ಸ್ವಾಮಿ ವಿವೇಕಾನಂದರು ಪುಣೆಗೆ ಭೇಟಿಯಿತ್ತಾಗ ಲೋಕಮಾನ್ಯ ತಿಲಕರನ್ನು ಕಂಡಿದ್ದು, ಅವರ ಆಮಂತ್ರಣದ ಮೇರೆಗೆ ಅವರ ನಿವಾಸದಲ್ಲಿ ತಂಗಿದ್ದುದು, ಮುಂದೆ ಸ್ವಾಮೀಜಿಯವರು ಹೀರಾ ಬೌಗ್‌ನ ಪ್ರತಿಷ್ಠಿತ ಡೆಕ್ಕನ್ ಕ್ಲಬ್‌ನಲ್ಲಿ ಪ್ರಭಾವಪೂರ್ಣವಾಗಿ ಮಾತನಾಡಿದ್ದು—ಇವೆಲ್ಲವೂ ಪುಣೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿಯಾಯಿತು.

ಸ್ವಾಮಿ ವಿವೇಕಾನಂದರೇ ಅಲ್ಲದೆ, ಶ್ರೀರಾಮಕೃಷ್ಣರ ನೇರ ಶಿಷ್ಯರನೇಕರು ಪುಣೆಯಲ್ಲಿ ಬಂದು ತಂಗುತ್ತಿದುದು. ಅದು ಇಲ್ಲಿ ಶ್ರೀರಾಮಕೃಷ್ಣ ಭಾವಾಂದೋಲನದ ಅಂಕುರಾರ್ಪಣೆಗೆ ಪ್ರೇರಕ ಶಕ್ತಿಯಾಯಿತು. ಮುಂದೆ ಪಾರ್ವತೀ ಗುಡ್ಡದ ತಪ್ಪಲಿನಲ್ಲಿ, ಸಣ್ಣ ಕೊಠಡಿಯೊಂದರಲ್ಲಿ ಕೆಲವು ಭಕ್ತರು ಶ್ರೀರಾಮಕೃಷ್ಣರ, ಶ್ರೀ ಮಹಾಮಾತೆಯವರ ಹಾಗೂ ಸ್ವಾಮಿ ವಿವೇಕಾನಂದರ ಭಾವಚಿತ್ರಗಳನ್ನು ಪೂಜಿಸತೊಡಗಿದರು. ಕ್ರಮೇಣ ಇದೇ ಒಂದು ಆಧ್ಯಾತ್ಮಿಕ ಕೇಂದ್ರವಾಗಿ ಅನೇಕ ಭಕ್ತರನ್ನು ಸೆಳೆಯತೊಡಗಿತು. ಮುಂದೆ ಅದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸ್ವಾಧೀನಕ್ಕೆ ಬಂದನಂತರ ರಾಮಕೃಷ್ಣ-ವಿವೇಕಾನಂದರ ಭಾವಾಂದೋಲನಕ್ಕೆ ಹೊಸ ಚಾಲನೆ ಬಂದಂತಾಯಿತು. ಮಿಷನ್ನಿನ ನೇತೃತ್ವದಲ್ಲಿ ಸ್ವಲ್ಪ ಸಮಯದಲ್ಲೇ ಪೂಜಾಗೃಹ ಹಾಗೂ ಪ್ರಾರ್ಥನಾ ಮಂದಿರ ತಲೆಯೆತ್ತಿದವು. ನಿಧಾನವಾಗಿ ಸ್ವಾಮಿ ವಿವೇಕಾನಂದರ ಸೇವಾದರ್ಶವನ್ನು ಕೃತಿಗಿಳಿಸುವ ಪ್ರಯತ್ನ ಸಾಗಿತು. ಆಶ್ರಮದ ವತಿಯಿಂದ ಅನೇಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಭಕ್ತಾದಿಗಳು ಆ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಸುಮಾರು ಎರಡು ದಶಕಗಳಿಂದಲೂ ಯಾವ ಸದ್ದು ಗದ್ದಲವಿಲ್ಲದೆ ಮಿಷನ್ನಿನ ಪ್ರಭಾವವಲಯ ಹೀಗೆ ವಿಸ್ತಾರವಾಗುತ್ತಲೇ ಬಂತು. ಕಳೆದ ದಶಕದಲ್ಲಿ ಪುಣೆಯಲ್ಲಿನ ರಾಮಕೃಷ್ಣ ಮಠ ತನ್ನ ಸೇವಾವ್ಯಾಪ್ತಿಯನ್ನು ವಿಸ್ತರಿಸುತ್ತ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಸಂದೇಶ ಪ್ರಸಾರಕ್ಕೆ ಒಂದು ಜೀವಂತವಾದ, ಚೈತನ್ಯಾತ್ಮಕವಾದ ಕೇಂದ್ರವಾಯಿತು. ಈ ದೇಶದ ಅನುಭಾವಿ ಸಂತರ ಬಗ್ಗೆ ಉಪನ್ಯಾಸಗಳು, ದಿವ್ಯತ್ರಯರ ಜನ್ಮದಿನೋತ್ಸವಗಳೊಂದಿಗೆ, ಬುದ್ಧ, ಕ್ರಿಸ್ತ, ಮುಂತಾದವರ ಜನ್ಮೋತ್ಸವಗಳನ್ನು ಆಚರಿಸುವುದು, ಇವುಗಳೆಲ್ಲಕ್ಕಿಂತಲೂ ಹೆಚ್ಚಾಗಿ, ಜಾತಿ ಮತ ಕುಲವೆಂಬ ಭೇದವಿಲ್ಲದೆ ಎಲ್ಲರಿಗೂ ಮುಕ್ತವಾಗಿ ತೆರೆಯಲ್ಪಟ್ಟಿರುವ ಶ್ರೀರಾಮಕೃಷ್ಣ ಮಂದಿರ, ಆಸ್ಪತ್ರೆ ಹಾಗೂ ಗ್ರಂಥಾಲಯಗಳ ಮೂಲಕ ಸಾರ್ವಜನಿಕರ ಸೇವೆ—ಇವೇ ಮುಂತಾದ ಕಾರ್ಯಕ್ರಮಗಳ ಮೂಲಕ ಈ ಕೇಂದ್ರವು ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿದೆ. ಕಳೆದ ಒಂದು ದಶಕದಿಂದ ಹಮ್ಮಿಕೊಳ್ಳಲಾಗಿದ್ದ ವೈವಿಧ್ಯಮಯವಾದ ಸೇವಾಕಾರ್ಯಗಳ ವಾರ್ಷಿಕ ವರದಿಗಳನ್ನು ನೋಡಿದಾಗ ರಾಮಕೃಷ್ಣ ಮಠ ತನ್ನದೇ ಆದ ರೀತಿಯಲ್ಲಿ ಒಂದು ಪ್ರಭಾವಪೂರ್ಣ ಶಕ್ತಿಯಾಗಿ ಪುಣೆಯಲ್ಲಿ ಬೆಳೆದಿದೆ ಎಂಬುದನ್ನು ಗಮನಿಸದಿರಲು ಸಾಧ್ಯವಿಲ್ಲ.

**ನಿಯತ ಕಾರ್ಯಕ್ರಮಗಳು** : ಎಲ್ಲ ರಾಮಕೃಷ್ಣ ಮಂದಿರಗಳಲ್ಲಿಯಂತೆ ಬೆಳಿಗ್ಗೆ ನಿತ್ಯ ಪೂಜೆ, ಸಾಯಂಕಾಲ ಪ್ರಾರ್ಥನೆ, ಭಜನೆ, ಏಕಾದಶಿಗಳಂದು ರಾಮನಾಮ ಸಂಕೀರ್ತನೆ, ಅವತಾರ ಪುರುಷರ ಜನ್ಮದಿನಾಚರಣೆ, ಗೋಕುಲಾಷ್ಟಮಿಯಂತೇ ಕ್ರಿಸ್‌ಮಸ್ ಆಚರಣೆ ಇವುಗಳೆಲ್ಲವೂ ಪುಣೆ ರಾಮಕೃಷ್ಣ ಮಂದಿರದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿವೆ.

**ವಾರ್ಷಿಕ ಉತ್ಸವಗಳು, ಅಂತರ್ಯೋಗ ಮತ್ತು ಸತ್ಸಂಗ ಕೂಟಗಳು** : ಇವುಗಳಲ್ಲಿ ಆಶ್ರಮದ ಭಕ್ತಾದಿಗಳು ಪ್ರತಿವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ.

**ಮಕ್ಕಳಿಗಾಗಿ ಸಂಸ್ಕಾರ ಶಿಬಿರಗಳು** : ಪ್ರತಿವರ್ಷವೂ ನಡೆಸಲಾಗುವ ಈ ಶಿಬಿರಗಳಲ್ಲಿ ಮಕ್ಕಳಿಗಾಗಿ ಶಾರೀರಿಕ ತರಬೇತಿ, ಸಮೂಹ ಗಾನ, ಪ್ರಾರ್ಥನೆ, ಹಾಗೂ ಕರಕುಶಲ ವಸ್ತುಗಳ ತಯಾರಿಕೆ ಮತ್ತು ನಾಟಕಗಳಲ್ಲಿ ಪಾಲ್ಗೊಳ್ಳುವುದು, ಕಥನಕಲೆ, ಚಿತ್ರಕಲೆ ಮುಂತಾದ ಸೃಜನಾತ್ಮಕ ಚಟುವಟಿಕೆಗಳಿರುತ್ತವೆ. ಮುಖ್ಯವಾಗಿ ವೈಜ್ಞಾನಿಕ ಮನೋಧರ್ಮವನ್ನು ಮಕ್ಕಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವುದು ಶಿಬಿರಗಳ ವೈಶಿಷ್ಟ್ಯ. ಪ್ರತಿವರ್ಷವೂ ಹೆಚ್ಚು ಹೆಚ್ಚು ಬೇಡಿಕೆಯಲ್ಲಿರುವ ಈ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸುವುದನ್ನು ಕಾಣಬಹುದು.

**ಶಾಲಾಮಕ್ಕಳಿಗಾಗಿ ಸ್ಪರ್ಧಾ ಚಟುವಟಿಕೆಗಳು**: ೫ ರಿಂದ ೧೦ನೆ ತರಗತಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳನ್ನು ಶಾಲಾ ಮತ್ತು ಕಾಲೇಜು ಉಪಾಧ್ಯಾಯರುಗಳ ಸಹಾಯದಿಂದ ನಡೆಸಲಾಗುತ್ತಿದೆ.

**ವಿವೇಕಾನಂದ ಬಾಲಕ ಸೇವಾ ಸಂಘ**: ಶಾಲೆಯಿಂದ ಅನತಿದೂರದಲ್ಲಿರುವ ಕೊಳಚೆ ಪ್ರದೇಶದ ಮಕ್ಕಳಿಗಾಗಿ ಮಠದಿಂದ ಅನೇಕ ಚಟುವಟಿಕೆಗಳನ್ನು ನಿಯೋಜಿಸಲಾಗಿದೆ. ಶಾರೀರಿಕ ಬೆಳವಣಿಗೆಗಾಗಿ ಆಟಗಳು, ಪ್ರಾರ್ಥನೆ, ಭಜನೆ, ಅವರ ಪಠ್ಯವಿಷಯಗಳ ಮೇಲೆ ವಿಶೇಷ ತರಗತಿಗಳು, ಪ್ರಯೋಗಶಾಲಾ ವ್ಯವಸ್ಥೆ, ಶೈಕ್ಷಣಿಕ ಸ್ಲೈಡ್ ಷೋ—ಇವೆಲ್ಲವೂ ಇಲ್ಲಿನ ಬಾಲಕ ಸಂಘದ ಕೆಲವು ವೈಶಿಷ್ಟ್ಯಗಳು. ಮಕ್ಕಳಿಗಾಗಿ ಹಾಲು, ಉಪಾಹಾರವನ್ನು ಕೊಡುವ ವ್ಯವಸ್ಥೆಯನ್ನೂ ಮಾಡಲಾಗಿದೆ.

**ಯುವ ಕಲ್ಯಾಣ ಚಟುವಟಿಕೆಗಳು** : ಆಧುನಿಕ ಪ್ರಪಂಚದಲ್ಲಿ ಯುವಜನತೆ ಎದುರಿಸುವ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಠದಿಂದ ಯುವಸಲಹಾ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ವಾರಕ್ಕೊಮ್ಮೆ ಯುವಜನರೆಲ್ಲ ಸೇರಿ ಮಠದ ಸಂನ್ಯಾಸಿಗಳು ಹಾಗೂ ಸಲಹಾ ತಜ್ಞರಿಂದ ವಿಶೇಷ ಸಲಹೆಗಳನ್ನು ಪಡೆಯುತ್ತಾರೆ. ಅನೇಕ ಯುವಜನರಿಗೆ ನಿಃಸ್ವಾರ್ಥ ಸೇವೆ ಸಲ್ಲಿಸಲು, ಒಳ್ಳೆಯ ಜೀವನವನ್ನು ನಡೆಸಲು ಪ್ರೇರಣೆಯನ್ನು ಈ ಕೇಂದ್ರ ನೀಡಿದೆ ಎಂಬುದು ಗಮನಾರ್ಹ ಸಂಗತಿ. ಯುವ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಸೌಲಭ್ಯ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರವನ್ನೂ ಮಠದಿಂದ ನಡೆಸಲಾಗುತ್ತಿದೆ. ಅವರಿಗೆ ಗ್ರಂಥಾಲಯದ ಸೌಲಭ್ಯವೂ ಇದೆ.

**ಸಂತ ಜ್ಞಾನೇಶ್ವರ ಸ್ಮೃತಿ ವ್ಯಾಖ್ಯಾನ ಮಾಲೆ ಹಾಗೂ ಇತರರ ಪ್ರವಚನ ಮಾಲೆಗಳು** : ಸುಮಾರು ೧೭ ವರ್ಷಗಳಿಂದ ಪ್ರತಿ ವರ್ಷವೂ ಮಹಾರಾಷ್ಟ್ರದ ಸಂತಶ್ರೇಷ್ಠ ಜ್ಞಾನೇಶ್ವರರ ಜೀವನ ಮತ್ತು ಉಪದೇಶಗಳ ಕುರಿತು ಒಂದು ಸಪ್ತಾಹ ಪ್ರವಚನ ಮಾಲೆಯೇ ಇರುತ್ತದೆ.

**ಸ್ವಾಮಿ ವಿವೇಕಾನಂದರ ಚಿಂತನೆಗಳ ಮೇಲೆ ಪ್ರವಚನಮಾಲೆ** : ಪ್ರಸಿದ್ಧ ಪತ್ರಕರ್ತರಿಂದ ಹಾಗೂ ವಿದ್ವಜ್ಜನರಿಂದ ವಿವೇಕಾನಂದರ ಉದ್ಬೋಧಕ ಚಿಂತನೆಗಳ ಕಾರ್ಯಪ್ರಣಾಲಿಯನ್ನು ಕುರಿತು ಬೋಧಪ್ರದವಾದ ಉಪನ್ಯಾಸಗಳ ಆಯೋಜನೆ ಸುಮಾರು ಒಂದೂವರೆ ದಶಕಗಳಿಂದಲೂ ಆಶ್ರಮದ ಕಾರ್ಯಕ್ರಮಗಳ ಅಂಗವಾಗಿದೆ.

**ವೈದ್ಯಕೀಯ ಸೇವಾ ವಿಭಾಗ** : ಇಲ್ಲಿನ ವೈದ್ಯಕೀಯ ಕೇಂದ್ರದಲ್ಲಿ ಸರ್ವವಿಧದಲ್ಲೂ ಸುಸಜ್ಜಿತವಾದ ಪಾಲಿಕ್ಲಿನಿಕ್ ಹಾಗೂ ಡಯಾಗ್ನೋಸ್ಟಿಕ್ ಸೌಲಭ್ಯಗಳಿವೆ. ನೇತ್ರೋಪಚಾರ ವಿಭಾಗ, ಪೆಥಾಲಜಿ, ಫಿಜಿಯೋಥೆರಪಿ, ನೇತ್ರಚಿಕಿತ್ಸೆ, ವೈದ್ಯಕೀಯ, ಕ್ಷಯರೋಗ ವಿಭಾಗಗಳೇ ಅಲ್ಲದೆ ಹೋಮಿಯೋಪಥಿ ಮೊದಲಾಗಿ ನಾನಾವಿಧವಾದ ಪರ್ಯಾಯ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯಗಳೂ ಇಲ್ಲಿವೆ. ಪುಣೆಯ ಖ್ಯಾತ ವೈದ್ಯ ತಜ್ಞರು ಸೇವೆ ಸಲ್ಲಿಸುತ್ತಿರುವ ಈ ವಿಭಾಗಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಉಚಿತ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ. ಹಿರಿಯ ನಾಗರಿಕರಿಗಾಗಿ ವೈದ್ಯಕೀಯ ತಪಾಸಣಾ ಸೌಲಭ್ಯಗಳೂ ಇಲ್ಲಿವೆ.

**ನೂತನ ಶ್ರೀರಾಮಕೃಷ್ಣ ವಿಶ್ವಮಂದಿರ** : ಸುಮಾರು ಒಂದೂವರೆ ದಶಕಗಳಿಂದಲೂ ಪುಣೆಯ ನಾಗರಿಕರ ಶೈಕ್ಷಣಿಕ, ವೈದ್ಯಕೀಯ ಹಾಗೂ ಆಧ್ಯಾತ್ಮಿಕ ಸೇವೆಯಲ್ಲಿ ತೊಡಗಿಕೊಂಡಿರುವ ರಾಮಕೃಷ್ಣ ಮಠವು ಎಲ್ಲ ವರ್ಗದ ಜನರಲ್ಲಿ ಜನಪ್ರಿಯವಾಗಿರುವುದು ಅಚ್ಚರಿಯೇನಲ್ಲ. ದಿನೇ ದಿನೇ ವಿಸ್ತಾರವಾಗುತ್ತಿರುವ ಭಕ್ತವೃಂದದ ಹಾಗೂ ಆಶ್ರಮಕ್ಕೆ ಬರುತ್ತಿದ್ದ ಸಾರ್ವಜನಿಕರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪುಣೆಗೆ ಒಂದು ಭವ್ಯವಾದ ಹಾಗೂ ಸುಂದರವಾದ ಶ್ರೀರಾಮಕೃಷ್ಣ ಮಂದಿರದ ಕೊರತೆ ಇತ್ತು. ಈ ಕೊರತೆಯನ್ನು ನೀಗಿಸಲೆಂದೇ ಸುಮಾರು ೩-೪ ವರ್ಷಗಳ



ಹಿಂದೆಯೇ ಈ ಮಂದಿರದ ಒಂದು ನಕ್ಷೆ ತಯಾರಾಗಿತ್ತು. ಇಲ್ಲಿ ಮೈತಳೆಯುವ ಮಂದಿರ ಶ್ರೀರಾಮಕೃಷ್ಣರು ಬದುಕಿದ ವಿಶ್ವ ಧರ್ಮಗಳ, ಧರ್ಮ ಸಮನ್ವಯದ ಬದುಕನ್ನು ಸಾರುವಂತಿರಬೇಕು ಎಂಬ ಆಶಯವನ್ನು ಹೊತ್ತು ಭವ್ಯ ಮಂದಿರದ ನಿರ್ಮಾಣ ಕಾರ್ಯ ಆರಂಭವಾಯಿತು.

ರಾಮಕೃಷ್ಣ ಮಂದಿರಗಳಿಗೆ ಅವೆಲ್ಲೇ ಇರಲಿ ಅವುಗಳದೇ ಆದ ವಿಶಿಷ್ಟ ಸಂಪ್ರದಾಯವೊಂದಿದೆ. ಬೇಲೂರು ಮಠದಲ್ಲಿನ ಮೂಲ ಮಂದಿರದ ರಚನೆಯ ರೂಪರೇಖೆಗಳನ್ನು ಸ್ವಾಮಿ ವಿವೇಕಾನಂದರೇ ನಿರೂಪಿಸಿದರು. ಭಾರತದ ವಿವಿಧ ರಾಜ್ಯಗಳಲ್ಲಿನ ಶಿಲ್ಪ ಕಲೆಯ ವೈಶಿಷ್ಟ್ಯಗಳು, ಹಿಂದೂ ದೇವಸ್ಥಾನಗಳ ವಾಸ್ತುಶಿಲ್ಪದ ವಿವರಗಳು ಹಾಗೂ ಇತರೆ ಎಲ್ಲ ಧರ್ಮಗಳ ಪೂಜಾಗೃಹಗಳ ವೈಶಿಷ್ಟ್ಯಗಳೆಲ್ಲ ಸೂಕ್ಷ್ಮರೂಪದಲ್ಲಿ ರಾಮಕೃಷ್ಣ ಮಂದಿರದಲ್ಲಿ ಹಾಸುಹೊಕ್ಕಾಗಿರಬೇಕು, ಅವುಗಳೆಲ್ಲದರ ಸಂಗಮ ರಾಮಕೃಷ್ಣ ಮಂದಿರವಾಗಬೇಕು ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಬೇಲೂರು ಮಠದ ದೇವಸ್ಥಾನವನ್ನು ಮಾದರಿಯಾಗಿಟ್ಟು ಕೊಂಡಿದ್ದರೂ ಪುಣೆಯಲ್ಲಿನ ದೇವಸ್ಥಾನದ ನಿರ್ಮಾಣದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡಿರುವುದು ಈ ದೇವಸ್ಥಾನದ ವೈಶಿಷ್ಟ್ಯ. ಖ್ಯಾತ ವಾಸ್ತುಶಿಲ್ಪಿಗಳಾದ ಪದ್ಮಶ್ರೀ ಅಚ್ಯುತ್ ಪಿ. ಕನವಿಂದೆ ಇಡೀ ದೇವಸ್ಥಾನದ ವಾಸ್ತುಶಿಲ್ಪಕ್ಕೆ ಚಾಲನೆಯಿತ್ತರು. ಅವರಿಂದ ಸಲಹೆಗಳನ್ನು ಪಡೆದು ಶ್ರೀಯುತ ನರೇಂದ್ರ ಡೆಂಗ್ಲೆಯವರೂ ದೇವಸ್ಥಾನದ ವಾಸ್ತುಶಿಲ್ಪದ ಪ್ರತಿಹಂತದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಶಿಲ್ಪಿಗಳ ಒಂದು ತಂಡವೇ ದೇವಸ್ಥಾನದ ನಿರ್ಮಾಣದಲ್ಲಿ ತೊಡಗಿಕೊಂಡಿತ್ತು. ಮಿಲೆನಿಯಂ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್ ದೇವಸ್ಥಾನದ ಸಿವಿಲ್ ಕಂಟ್ರಾಕ್ಟರ್‌ಗಳಾಗಿ ಕೆಲಸ ನಿರ್ವಹಿಸಿದರು. ಇದರ ಉದ್ಘಾಟನೆಯು ಏಪ್ರಿಲ್ ೨೧ರಂದು ನಡೆಯಿತು. ಇದರ ವಿವರಗಳಿಗೆ ಪುಟ ೩೯ ನೋಡಿ.

# ದೀನಬಂಧು ಶ್ರೀರಾಮಕೃಷ್ಣ

ಆ ದಿನ ಶ್ರೀರಾಮಕೃಷ್ಣರ ಜನ್ಮೋತ್ಸವವನ್ನು ಭಕ್ತರು ವಿಜೃಂಭಣೆಯಿಂದ ದಕ್ಷಿಣೇಶ್ವರದ ಕಾಳೀ ದೇವಾಲಯದ ಪ್ರಾಂಗಣದಲ್ಲಿ ಆಚರಿಸುತ್ತಿದ್ದಾರೆ. ಬೆಳಗ್ಗೆ ಕೀರ್ತನಕಾರರಿಂದ ಬಹಳ ಹೊತ್ತು ಕಾಳೀ ಕೀರ್ತನೆ ಇತ್ಯಾದಿ ನಡೆಯಿತು. ಪರಮಹಂಸರೂ ಅದರಲ್ಲಿ ಭಾಗವಹಿಸಿ ಮಧ್ಯೆ ಮಧ್ಯೆ ಹಾಡು ನರ್ತನಗಳಿಂದ ಭಕ್ತರನ್ನು ರಂಜಿಸಿದರು.

ಈಗ ಅವರು ಊಟಮಾಡಿ, ತಮ್ಮ ಕೋಣೆಯಲ್ಲಿ ವಿಶ್ರಮಿಸಿಕೊಳ್ಳುತ್ತಾ, ಹಾಗೆಯೇ ಭಕ್ತರಿಂದಾವೃತರಾಗಿ ಮಾತುಕತೆಯಾಡುತ್ತಿದ್ದಾರೆ. ಆಗ ಬಡಮಹಿಳೆಯೊಬ್ಬಳು, ಪರಮಹಂಸರಿಗೆ ಅರ್ಪಿಸಲು, ನಾಲ್ಕು ರಸಗೊಲ್ಲಾಗಳನ್ನು ಒಂದು ಬಟ್ಟಲಿನಲ್ಲಿಟ್ಟುಕೊಂಡು ಅಲ್ಲಿಗೆ ಬಂದಳು. ಆದರೆ ಭಕ್ತರಿಂದಾವೃತವಾದ ಪರಮಹಂಸರ ಕೋಣೆಗೆ ನೇರವಾಗಿ ಹೋಗಿ ಅದನ್ನರ್ಪಿಸಲು ಅವಳಿಗೆ ಸಂಕೋಚವಾಯಿತು. ಆದ್ದರಿಂದ ಶ್ರೀಮಾತೆಯವರಿದ್ದ ವಾದ್ಯಕುಟೀರದ ಬಳಿಗೆ ಹೋಗಿ ತಾನು ತಂದಿದ್ದ ಸಿಹಿತಿಂಡಿಯನ್ನು ಪರಮಹಂಸರಿಗೆ ಕಳಿಸಿಕೊಡಲು ಕೇಳಿಕೊಂಡಳು.

ಶ್ರೀಮಾತೆಯವರು ಏನನ್ನಾದರೂ ಹೇಳುವುದಕ್ಕೆ ಮುಂಚೆಯೇ ಅಲ್ಲಿದ್ದ ಮಹಿಳೆಯೊಬ್ಬಳು ಹೇಳಿದಳು :"ಠಾಕೂರರು ಈಗಾಗಲೆ ಊಟ ಮುಗಿಸಿ ವಿಶ್ರಮಿಸಿಕೊಳ್ಳುತ್ತಿದ್ದಾರೆ; ಈಗ ನೀನಿದನ್ನು ಕಳಿಸಿದರೆ ಅವರು ತಿನ್ನುತ್ತಾರೆಯೇ ಎಂದು ನನಗೆ ಸಂದೇಹ." ಈ ಮಾತು ಕೇಳಿ ಆ ಮಹಿಳೆ ಸಿಡಿಲು ಬಡಿದವಳಂತೆ ದಿಗ್ಭ್ರಾಂತಳಾದಳು. ನಿರಾಶೆಯಿಂದ ಅಧೋವದನಳಾಗಿ, ಪ್ರತಿಮೆಯಂತೆ ಅಲ್ಲೇ ನಿಂತುಕೊಂಡಳು.

ಅಲ್ಲಿ, ಭಕ್ತರೊಂದಿಗೆ ಮಾತನಾಡುತ್ತಿದ್ದ ಪರಮಹಂಸರು—ಈ ಭಕ್ತೆಯ ಹೃದಯವೇದನೆ ತಮಗೆ ತಿಳಿಯಿತೆನೋ ಎಂಬಂತೆ—ಇದ್ದಕ್ಕಿದ್ದಂತೆ ವೇಗವಾಗಿ ನಡೆದು ಬಂದು, ನಿರ್ಜೀವ ವಿಗ್ರಹದಂತೆ ಕೈಯಲ್ಲಿ ರಸಗೊಲ್ಲವಿದ್ದ ಬಟ್ಟಲನ್ನು ಹಿಡಿದುಕೊಂಡು ನಿಂತಿದ್ದ ಭಕ್ತೆಯ ಬಳಿ ಬಂದರು. ಬಳಿಕ ಆಕೆಯಿಂದ ಬಟ್ಟಲನ್ನು ತೆಗೆದುಕೊಂಡು ಆ ರಸಗೊಲ್ಲಗಳನ್ನು ಎಷ್ಟು ತ್ವರಿತವಾಗಿ ತಿಂದರೆಂದರೆ, ನೋಡಿದವರಿಗೆ ಅವರು ಬೆಳಗಿನಿಂದಲೂ ಈವರೆಗೆ ಏನನ್ನೂ ತಿಂದಿರಲಿಲ್ಲವೇನೋ ಎನ್ನಿಸಿತು. ಇದರಿಂದಾಗಿ ಆ ಬಡ ಭಕ್ತೆಗಾದ ಆನಂದವನ್ನು ಏನೆಂದು ವರ್ಣಿಸುವುದು!

—ಸಂಗ್ರಹ: ಎನ್. ಗೋಪೀನಾಥ

(ಆಧಾರ: ಬಂಗಾಳಿ ಮಹಾಕಾವ್ಯ, "ಶ್ರೀರಾಮಕೃಷ್ಣ ಪುಂಥೀ" ಇಂಗ್ಲಿಷ್ ಅನುವಾದ,)